ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಕೊಳಚೆ ಪ್ರದೇಶದ ಜನರಿಗೆ ನಾಗರೀಕ ಸೌಲಭ್ಯಗಳನ್ನು ಒದಗಿಸುವುದು

೨೩೭೭. ಶ್ರೀ ಎಂ. ಎಲ್. ಉಸ್ತಾದ್ (ಬಿಜಾಪುರ).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬಿಜಾಪುರ ನಗರದಲ್ಲಿ ಗುರುತಿಸಲಾದ ಕೊಳಚೆ ಪ್ರದೇಶಗಳೆಷ್ಟು ?

ಆ) ಈ ಕೊಳಚೆ ಪ್ರದೇಶಗಳಿಗೆ ನಾಗರೀಕ ಸೌಲಭ್ಯಗಳನ್ನು ಒದಗಿಸಲಾಗಿದೆಯೆ ?

ಇ) ಇಲ್ಲದಿದ್ದ ಪಕ್ಷದಲ್ಲಿ ಈ ಕೊಳಚೆ ಪ್ರದೇಶಗಳಿಗೆ ನಾಗರೀಕ ಸೌಲಭ್ಯಗಳನ್ನೊದಗಿಸಲು ಸರ್ಕಾರವು ಯಾವ ಕ್ರಮ ಕೈಗೊಂಡಿದೆ.

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಸಚಿವರು).—

ಅ) ೨೦. (ಬಿಜಾಪುರ ನಗರದಲ್ಲಿ ೨೦ ಕೊಳಚೆ ಪ್ರದೇಶಗಳನ್ನು ಗುರ್ತಿಸಲಾಗಿದೆ)

ಆ) ಗುರ್ತಿಸಲ್ಪಟ್ಟಿರುವ ೨೦ ಕೊಳಚೆ ಪ್ರದೇಶಗಳ ಪೈಕಿ ೭ ಕೊಳಚೆ ಪ್ರದೇಶಗಳಲ್ಲಿ ನಾಗರೀಕ ಸೌಲಭ್ಯಗಳನ್ನು ಒದಗಿಸುವ ಕಾರ್ಯವನ್ನು ತೆಗೆದುಕೊಳ್ಳಲಾಗಿದ್ದು ಇವುಗಳಲ್ಲಿನ ೪ ಪ್ರದೇಶಗಳಲ್ಲಿ ಮುಕ್ತಾಯಗೊಂಡಿದ್ದು. ೨ ಪ್ರದೇಶಗಳಲ್ಲಿ ಕಾರ್ಯ ಪ್ರಗತಿಯಲ್ಲಿದ್ದು ಒಂದರಲ್ಲಿನ ಕಾರ್ಯ ನ್ಯಾಯಾಲಯದಿಂದ ತಡೆಯಾಗಿ ಬಂದ ಕಾರಣ ಸ್ಥಗಿತಗೊಳಿಸಲಾಗಿದೆ.

ಇ) ಉಳಿದ ಕೊಳಚೆ ಪ್ರದೇಶಗಳಿಗೆ ನಾಗರಿಕಕ ಸೌಲಭ್ಯಗಳನ್ನು ಹಂತ ಹಂತವಾಗಿ ಒದಗಿಸಲು ಯೋಚಿಸಲಾಗಿದ್ದು, ಈ ವರ್ಷದಲ್ಲಿ ೩ ಕೊಳಚೆ ಪ್ರದೇಶಗಳಲ್ಲಿ ಕಾರ್ಯ ಕೈಗೊಳ್ಳಲು ಯೋಚಿಸಲಾಗಿದೆ.

ಮಸೀದಿಗಳಿಗೆ ವಕ್ಫ್ ಮಂತ್ರು ಹಜ್ ಸಮಿತಿಗಳಿಂದ ಹಣ ಮಂಜೂರಾತಿ

೨೩೭೫. ಶ್ರೀ ಚಂದ್ರಶೇಖರ್ ಮಾಮನಿ (ಪರಸಗಡ).—ಮಾನ್ಯ ಗ್ರಾಮೀಣಾಭಿವೃದ್ಧಿ, ಪಂಚಾಯತ್‌ರಾಜ್ ಮತ್ತು ವಕ್ಫ್ ಹಾಗೂ ಪಶುಸಂಗೋಪನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸವದತ್ತಿ ತಾಲ್ಲೂಕಿನಲ್ಲಿರುವ ಮಸೀದಿಗಳೆಷ್ಟು ?

ಆ) ಕಳೆದ ೩ ವರ್ಷಗಳಿಂದ ರಾಜ್ಯದಲ್ಲಿ ವಕ್ಫ್ ಮತ್ತು ಹಜ್ ಸಮಿತಿಯಿಂದ ಮಸೀದಿಗಳಿಗೆ ಕೊಡಲಾಗಿರುವ ಹಣವೆಷ್ಟು (ವಿವರ ನೀಡುವುದು).

ಇ) ಸದರಿ ಸಮಿತಿಯು ಸವದತ್ತಿ ತಾಲ್ಲೂಕಿನ ಮಸೀದಿಗಳಿಗೆ ಬಿಡುಗಡೆ ಮಾಡಿರುವ ಹಣವೆಷ್ಟು (ಮಸೀದಿಗಳಿಗೆ ಹೆಸರು ಮತ್ತು ವಿವರ ನೀಡುವುದು).

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ಮತ್ತು ವಕ್ಫ್ ಹಾಗೂ ಪಶುಸಂಗೋಪನಾ ಮಂತ್ರಿಗಳು).—

ಅ) ೩೩;

ಆ) ರಾಜ್ಯದಲ್ಲಿ ಬಡ ಮಸೀದಿಗಳಿಗೆ ರಾಜ್ಯ ಸರ್ಕಾರದಿಂದ ಮಾತ್ರ ಧನ ಸಹಾಯ ಮಾಡಲಾಗುತ್ತಿದೆ. ವಕ್ಫ್ ಸಮಿತಿಯಾಗಲಿ ಅಥವಾ ಹಜ್ ಸಮಿತಿಯಾಗಲಿ ಕಳೆದ ೩ ವರ್ಷಗಳಿಂದ ಯಾವ ಧನಸಹಾಯವನ್ನೂ ಕೊಟ್ಟಿರುವುದಿಲ್ಲ. ರಾಜ್ಯ ಸರ್ಕಾರದಿಂದ ಕಳೆದ ೩ ವರ್ಷಗಳಲ್ಲಿ ಮಸೀದಿಗಳಿಗೆ ಮಂಜೂರಾದ ಧನ ಸಹಾಯದ ವಿವರ ಈ ಕೆಳಕಂಡಂತಿದೆ.

೧) ೧೯೮೫-೮೬ ರೂ. ೫೦ ಲಕ್ಷಗಳು
೨) ೧೯೮೬-೮೭ ರೂ. ೬೦ ,,
೩) ೧೯೮೭-೮೮ ರೂ. ೬೦ ,,

೧) ಯಾವ ಸಮಿತಿಯು ಈ ಮಸೀದಿಗೆ ಹಣ ಕೊಟ್ಟಿರುವುದಿಲ್ಲ. ರಾಜ್ಯ ಸರ್ಕಾರದಿಂದ ಮಂಜೂರಾದ ಧನ ಸಹಾಯದ ವಿವರವನ್ನು ಲಗತ್ತಿಸಿದ ತಃಖ್ತೆಯಲ್ಲಿ ನೀಡಲಾಗಿದೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ ೨೩೭೫

ಕಳೆದ ೩ ವರ್ಷಗಳಿಂದ ರಾಜ್ಯದಲ್ಲಿ ವಕ್ಫ್ ಮತ್ತು ಹಜ್ ಸಮಿತಿಯಿಂದ ಮಸೀದಿಗಳಿಗೆ ಕೊಡಲಾಗಿರುವ ಹಣದ ವಿವರ

ಕ್ರಮ ಸಂಖ್ಯೆ	ವರ್ಷ		ಸಂಸ್ಥೆಯ ಹೆಸರು	ಮಂಜೂರಾದ ಹಣ
೧	೨		೩	೪
			ನಂ. ಆರ್‌ಡಿ ೧೦ ಡಬ್ಲ್ಯೂಜಿಎ ೮೫ ದಿನಾಂಕ ೧೯-೨-೧೯೮೬	
೧	೧೯೮೫-೮೬	೧	ಮಸೀದಿ ಯಾಡಹಳ್ಳಿ, ಸವದತ್ತಿ ತಾಲ್ಲೂಕು, ಬೆಳಗಾಂ	೫,೦೦೦-೦೦
		೨	ಮಸೀದಿ, ತಾಲೂರು, ಸವದತ್ತಿ ತಾಲ್ಲೂಕು, ಬೆಳಗಾಂ	೫,೦೦೦-೦೦
		೩	ಇದ್ಗಾ ಮುಸ್ಲಿಂ ಜಮಾತ್, ಸವದತ್ತಿ, ತಾಲ್ಲೂಕು, ಬೆಳಗಾಂ	೫,೦೦೦-೦೦
			ನಂ. ಆರ್‌ಡಿ ೧೦ ಡಬ್ಲ್ಯೂಜಿಎ ೮೫ ದಿನಾಂಕ ೨೦-೩-೧೯೮೬	
		೪	ಟಿಪ್ಪುಸಂಲ್ತಾನ್ ಮಸೀದಿ, ತಾನ್‌ಜೀನ್ ಕಮಿಟಿ, ಮುನ್ನವಳ್ಳಿ ಸವದತ್ತಿ ತಾಲ್ಲೂಕು, ಬೆಳಗಾಂ	೫,೦೦೦-೦೦
		೫	ಮಸೀದಿ ತಾಲೂರು, ಸವದತ್ತಿ ತಾಲ್ಲೂಕು, ಬೆಳಗಾಂ	೧೦,೦೦೦-೦೦
		೬	ಮಸೀದಿ ಸತ್ತಿಗೇರಿ, ಸವದತ್ತಿ ತಾಲ್ಲೂಕು ಬೆಳಗಾಂ	೧೦,೦೦೦-೦೦
		೭	ಮಸೀದಿ ಮುನವಗೋಳ್, ಸವದತ್ತಿ ತಾಲ್ಲೂಕು, ಬೆಳಗಾಂ	೫,೦೦೦-೦೦
		೮	ಮಸೀದಿ, ಹೊಸೂರು, ಸವದತ್ತಿ ತಾಲ್ಲೂಕು, ಬೆಳಗಾಂ	೫,೦೦೦-೦೦
		೯	ಜುಮ್ಮಾ ಮಸೀದಿ, ಸವದತ್ತಿ ತಾಲ್ಲೂಕು, ಬೆಳಗಾಂ	೧೦,೦೦೦-೦೦
			ನಂ. ಆರ್‌ಡಿ ೨೦ ಡಬ್ಲ್ಯೂಜಿಎ ೮೬ ದಿನಾಂಕ ೨೧-೧೧-೧೯೮೬	
೨	೧೯೮೬-೮೭	೧	ಜಾಮೀಯಾ ಮಸೀದಿ, ಬೈಲಹೊಂಗಲ, ಸವದತ್ತಿ, ತಾಲ್ಲೂಕು ಬೆಳಗಾಂ	೧೦,೦೦೦-೦೦
		೨	ಮಸೀದಿ, ಇಂಗಳಗಿ, ಸವದತ್ತಿ ತಾಲ್ಲೂಕು, ಬೆಳಗಾಂ	೫,೦೦೦-೦೦
		೩	ಮಸೀದಿ, ಮುರಗೋಡ, ಸವದತ್ತಿ ತಾಲ್ಲೂಕು, ಬೆಳಗಾಂ	೫,೦೦೦-೦೦
		೪	ಮಸೀದಿ, ಹೊಸೂರಕಿ, ಸವದತ್ತಿ ತಾಲ್ಲೂಕು, ಬೆಳಗಾಂ	೫,೦೦೦-೦೦
		೫	ಮಸೀದಿ, ಚಟದಿ, ಸವದತ್ತಿ ತಾಲ್ಲೂಕು, ಬೆಳಗಾಂ	೧೦,೦೦೦-೦೦
		೬	ಮಸೀದಿ, ಇಂಚಾಲ್, ಸವದತ್ತಿ ತಾಲ್ಲೂಕು, ಬೆಳಗಾಂ	೫,೦೦೦-೦೦

ನಂ. ಆರ್‌ಡಿ ೯ ಡಬ್ಲ್ಯೂಜಿಎ ೮೭ ದಿನಾಂಕ ೧೪-೩-೧೯೮೮

೩	೧೯೮೭-೮೮	೧	ಪೀರ್ ಮೌಲಲಿ ಮಸೀದಿ, ರಾಮಾಪುರ, ಸವದತ್ತಿ ತಾಲ್ಲೂಕು, ಬೆಳಗಾಂ	೧೦,೦೦೦-೦೦
		೨	ಪೀರ್ ಮಹಬೂಬ್, ಸುಭಾನಿ ಮಸೀದಿ ಸವದತ್ತಿ ತಾಲ್ಲೂಕು, ಬೆಳಗಾಂ	೫,೦೦೦-೦೦
		೩	ಪೀರ್ ಹೈದರ್ ಮಸೀದಿ ರಾಮಾಪುರ, ಸವದತ್ತಿ ತಾಲ್ಲೂಕು, ಬೆಳಗಾಂ	೫,೦೦೦-೦೦
		೪	ಇದ್ಗಾ, ಉರಗೋಳ ಹಳ್ಳಿ, ಸವದತ್ತಿ ತಾಲ್ಲೂಕು, ಬೆಳಗಾಂ	೧೦,೦೦೦-೦೦
		೫	ಬಾಡಲಿ ಮಸೀದಿ, ಉಗ್ರಗೋಳ ಹಳ್ಳಿ, ಸವದತ್ತಿ ತಾಲ್ಲೂಕು, ಬೆಳಗಾಂ	೫,೦೦೦-೦೦
		೬	ಮಸೀದಿ, ಇಂಗಲಗಿ, ಸವದತ್ತಿ ತಾಲ್ಲೂಕು ಬೆಳಗಾಂ	೧೦,೦೦೦-೦೦
		೭	ಮಸೀದಿ, ಮಟಿಕೋಲಿ, ಸವದತ್ತಿ ತಾಲ್ಲೂಕು, ಬೆಳಗಾಂ	೫,೦೦೦-೦೦

ತಾಲ್ಲೂಕು ಪಂಚಾಯಿತಿಗಳಿಗೆ ಕಾಮಗಾರಿಗಳನ್ನು ಕೈಗೊಳ್ಳಲು ಅಧಿಕಾರ ವಹಿಸಿಕೊಡುವುದು

೨೨೨೧. ಶ್ರೀ ಐ. ಬಿ. ಶಂಕರ್ (ಚಿಕ್ಕಮಗಳೂರು) — ಮಾನ್ಯ ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ಹಾಗೂ ಪಕ್ಷ್ ಮಂತರ್ಯ ಪಶಂಸಂಗೋಪನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ತಾಲ್ಲೂಕು ಅಭಿವೃದ್ಧಿ ಕಾಮಗಾರಿಗಳು ನೇರವಾಗಿ ಜಿಲ್ಲಾ ಪರಿಷತ್ತಿನ ಅಧಿಕಾರ ವ್ಯಾಪ್ತಿಯಲ್ಲಿ ಬರುವುದರಿಂದ ಕಾಮಗಾರಿಗಳು ವಿಳಂಬವಾಗುತ್ತಿದ್ದು ಸದರಿ ಕಾಮಗಾರಿಗಳು ಚುರುಕುಗೊಳಿಸುವುದಕ್ಕಾಗಿ ಇದರ ಅಧಿಕಾರ ವ್ಯಾಪ್ತಿಯನ್ನು ತಾಲ್ಲೂಕು ಪಂಚಾಯಿತಿಗೆ ವಹಿಸುವುದು ಸೂಕ್ತವಲ್ಲವೇ ?

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದ ನಿಲುವೇನು ? ವಿವರ ನೀಡುವುದು

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು).—

ಅ) ಇಲ್ಲ. ಆದರೂ, ಕಲಂ ೧೩೬ (೧) (ಬಿ) ಪ್ರಕಾರ ಜಿಲ್ಲಾ ಪರಿಷತ್ತಿನವರೇ ಇದನ್ನು ನಿರ್ಧರಿಸಬಹುದು.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಪುರಸಭೆ ಹಾಗೂ ನಗರಸಭೆಗಳಿಗೆ ಬಹುಮಾನ ಯೋಜನೆ

೧೮೭೬. ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).— ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಪುರಸಭೆ ಹಾಗೂ ನಗರಸಭೆಗಳ ಕಾರ್ಯ ದಕ್ಷತೆ ಹೆಚ್ಚಿಸಲು ಹಾಗೂ ಪ್ರಗತಿಯನ್ನು ಮೆಚ್ಚಿ, ಬಹುಮಾನ ಯೋಜನೆ ಜಾರಿಗೆ ತಂದಿರುವುದು ಉಪಯೋಗವಾಗಿದೆಯೇ ?

ಆ) ಸಂಬಂಧಪಟ್ಟ ಪುರಸಭೆ/ನಗರಸಭೆಗಳು ಈ ಬಹುಮಾನ ಪಡೆಯುವಂತೆ ಆಕರ್ಷಿಸಲು ಅವರು ಯಾವ ಯಾವ ಬಾಬಿನಲ್ಲಿ ಪ್ರಗತಿ ಹೊಂದಿರಬೇಕೆಂಬ ನಿರ್ದಿಷ್ಟವಾದ ವಿವರವನ್ನೊಳಗೊಂಡ ಪರಿಪತ್ರ ಸರ್ಕಾರದಿಂದ ಹೊರಡಿಸಲಾಗಿದೆಯೇ ?